Doc-309
T.P-2

(1)

51 st Year of Publication ★ SATYAVADI Daily, MYSORE 4

Reg No B G 155

28 - 5 - 1968

ಪ, ಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available

For Permanent Advertisement

ಸ್ಥಾಪಕರು : ಆರನುತ್ತಿ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಹಿಂದಿ ವಿರುದ್ಧ ನಾಲ್ಕು ರಾಜ್ಯಗಳ ಸಮಾನಾಧಿಕರಣ !

ಮೈಸೂರು ಅಶೋಕಾ ಟಾಕೀಸ್ ಬಳಿ ಹಾಕಿರುವ ತಮ್ಮ ಸ್ವಂತ ಛಾವಣಿ

ಥಿಯೇಟರಿನಲ್ಲಿ ಪ್ರತಿ ದಿನ ಸಂಜೆ 6-30 ರಿಂದ 12-30 ರ ವರೆಗೆ

ವಿವಿಧ ವಿನೋದ Pastime & sports

ಸುಪ್ರಸಿದ್ಧ ನರ್ತಕಿಯರಿಂದ ವಿವಿಧ ತರದನೃತ್ಯಗಳು, ಹೈದ್ರಾಬಾದಿನ ಸುಪ್ರಸಿದ್ಧ ಜಾದುಗಾರ ಶ್ರೀ ಎಲ್. ಎ. ಬಾಬು ಇವರಿಂದ ಅದ್ಭುತಮಯವಾದ ಇಂದ್ರಜಾಲಾಟ ನಡೆಯುವ ಮಾತನಾಡುವ ಬೊಂಬೆ, ಎಲೆಕ್ಟ್ರಿಕ್ ಕಾರ್ಟೆ. ಪ್ರವೇಶದರ 25 ಪೈಸೆ

"ಸತ್ಯವಾದಿ"ಯ ಸ್ವರ್ಣೋತ್ಸವ

"ಸತ್ಯವಾದಿ"ಯ ಸ್ವರ್ಣೋತ್ಸವವನ್ನು ಶ್ಲೇಷ್ಮವಲ್ಲೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು ಶ್ರೀಮನ್ಮಹಾರಾಜರು, ಮಿತ್ರತರಗಣ್ಯರು ಆಶಿಸಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇದ್ದು.

ಉತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆಯಾ ವರ್ಗಗಳಿಂದ ನೀಡಿ ಸಹಕರಿಸಬೇಕೆಂದು ವಿನಂತಿಸಿ ಈಡೇರುವೆದೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಪೌರಸಭೆ

ಮೈಸೂರು— ಪೌರಸಭೆಯ ಈ ಮಾಹೆಯ ಸಾಧಾರಣ ಅಧಿವೇಶನವು ತಾ॥ 31 ಗುರುವಾರ ಮಧ್ಯಾಹ್ನಾತ್ಪರ 4 ಗಂಟೆಗೆ ನಡೆಯುವುದು.

ಲಲಿತಕಲಾ ಮಹೋತ್ಸವ

ತಾ॥ 29-5-68 ಕಾರ್ಯಕ್ರಮ

ಸಂಜೆ 6 ಗಂಟೆಗೆ ಹಾಡುಗಾರಿಕೆ
" 7 " ನೃತ್ಯ

ಸಚಿವರು ಮಾಡುವದೇನು

ಜರ್ಮನಿಯ ನೋಪಲಿಸ್ಟ್ ಡೆ ಮೋಕ್ರಾಟ್ ಮಂತ್ರಿ ವಾಲ್ಟರ್ ಕ್ರೌಸ್ ಸ್ವಾಬಿಯಾದ ಒಂದು ಮಾಧ್ಯಮ ಪ್ರಮಾಣದ ಕಾರ್ಖಾನೆಗೆ ಭೇಟಿಕೊಟ್ಟು, ಕಾರ್ಮಿಕರನ್ನು ಕುರಿತು ಚಿಕ್ಕ ಭಾಷಣ ಮಾಡಿದರು. ನಂತರ ಕಾರ್ಖಾನೆಯ ಡೈರೆಕ್ಟರು, ಏನಾದರೂ ಪ್ರಶ್ನೆಸಬೇಕಾಗಿದೆಯೇ ? ಎಂದು ಕೇಳಿದರು. ದೀರ್ಘ ಮೌನಾನಂತರ ಒಬ್ಬ ಮಹಿಳೆಯು ' ಹೇಗಾದರೂ, ನೀವು ದಿನವೆಲ್ಲಾ ಏನು ಮಾಡುವಿರಿ " ಎಂದು ಮಂತ್ರಿಗಳನ್ನು ಕೇಳಿದಳು !

★

ಜೈಲಿನ ಮೂರಾಟ

ಜರ್ಮನಿಯಲ್ಲಿನ ಹೆಸ್ ರಾಜ್ಯ ಸರಕಾರವು ತನ್ನ ಜೈಲನ್ನು ಮಾರಲು ಪ್ರಯತ್ನಿಸುತ್ತಿದೆ. ಅದರಲ್ಲಿ ಯಾರೂ ಇಲ್ಲದೆ ಖಾಲಿಯಾಗಿದೆ. ಈ ಹಳೇ ಜೈಲು ಕಟ್ಟಡಕ್ಕೆ ದಪ್ಪ ಗೋಡೆಗಳೂ, ಸಲಾಕೆಗಳಿಂದ ಕೂಡಿದ ಕಿಟಿಕಿಗಳೂ, ಭದ್ರವಾದ ಬಾಗಿಲುಗಳೂ ಇವೆ. ಅಲ್ಲಿಯ ಯಾವ ಇಲಾಖೆಯೂ ಇದನ್ನು ಕೊಳ್ಳಲ್ಲು ಇಚ್ಛಿಸಿಲ್ಲವಾಗಿ, ಬಹಿರಂಗವಾಗಿ ಮಾರಲು ಸರಕಾರ ಯತ್ನಿಸಿದೆ.

ಕಾಂಗ್ರೆಸ್ಸಿಗೆ ವಿಜಯ

ಲಕ್ನೋ— ಇಲ್ಲೀ ಪೌರಸಭೆಯಲ್ಲಿ ಕಾಂಗ್ರೆಸ್ಸಿಗೆ ಸ್ಪಷ್ಟ ಬಹುಮತ ಬಂದು, ಕಾಂಗ್ರೆಸ್ಸು ಆಡಳಿತ ಸಿಕ್ಕಿದೆ.

★

ರಷ್ಯಾ ರಾಯಭಾರಿ ಕಚೇರಿ ಮುಂದೆ

ಕಾರ್ಖಾರಾದಲ್ಲಿಯ ರಷ್ಯಾ ರಾಯಭಾರಿ ಕಚೇರಿ ಮುಂದೆ, ಉಕ್ರೇನಿನ 300 ಮಂದಿ ಕೋಳೀಮೊಟ್ಟೆ ಎಸೆಯುತ್ತಾ, ತಮ್ಮ ದೇಶದಲ್ಲಿ ರಷ್ಯಾ ಆಡಳಿತವನ್ನು ವಿರೋಧಿಸಿ ಪ್ರದರ್ಶನ ನಡೆಸಿದರು — ಕಚೇರಿ ಕಿಟಕಿ ಮುರಿದರು — ಕಟ್ಟಡವನ್ನು ಸುಡಲು ಯತ್ನಿಸಿದರು.

★

ಹೊಸ ಮಂತ್ರಿಮಂಡಲ

ನವದೆಹಲಿ— ಮೈಸೂರಿನ ಹೊಸ ಮಂತ್ರಿಮಂಡಲದಲ್ಲಿ ನಿಜಲಿಂಗಪ್ಪ ಮಂತ್ರಿಮಂಡಲದ ನಾಲ್ಕೈದು ಮಂದಿಗಳನ್ನು ಬಿಡಲಾಗುವದೆಂದೂ, ಶ್ರೀ ಜತ್ತಿಯವರಿಗೂ ಸ್ಥಾನವಿರುವಂತಿಲ್ಲವೆಂದೂ, ಶ್ರೀ ಜತ್ತಿಯವರಿಗೆ ಕೇಂದ್ರ ಮಂತ್ರಿಮಂಡಲದಲ್ಲಿ ಸ್ಥಾನ ಸಿಕ್ಕಬಹುದೆಂದೂ, ಶ್ರೀ ಜತ್ತಿಗುಂಪಿನವರೊಬ್ಬರಿಬ್ಬರಿಗೆ ಮಂತ್ರಿಮಂಡಲದಲ್ಲಿ ಸ್ಥಾನ ಸಿಕ್ಕಬಹುದೆಂದೂ ಹೇಳಲಾಗಿದೆ.

●

ದೈಹಿಕ ಡಿಗ್ರಿ ಪರೀಕ್ಷೆ

ದೈಹಿಕ ಡಿಗ್ರಿ ಪರೀಕ್ಷೆಗಾಗಿ ಮದ್ರಾಸಿನಲ್ಲಿರುವ ವೈ. ಎಂ. ಸಿ. ಎ. ಗೆ ಮದ್ರಾಸಿನ ವಿಶ್ವವಿದ್ಯಾನಿಲಯ ಅಫಿಲಿಯೇಷನ್ ನೀಡಿದೆ.

★

ಹಾಸನ ಬಂದ್

ಹಾಸನ— ಹೊಸ ವ್ಯವಸಾಯ ಸಂಬಂಧ ಶಾಸನವನ್ನು ಪ್ರತಿಭಟಿಸಿ ಇಂದು ಹರತಾಳಕ್ಕೆ ಕರೆಕೊಡಲಾಗಿದೆ.

ಹಿಂದಿ ವಿರುದ್ಧ ಕಾರ್ಯ

ಕೊಚ್ಚಿ— ಕೇರಳ, ಮದರಾಸು, ಮೈಸೂರು, ಆಂಧ್ರದಲ್ಲಿನ ಹಿಂದಿ ವಿರುದ್ಧ ಚಳವಳವನ್ನು ಸಮಾನಾಧಿಕರಣ ಮಾಡುವ ಮಾರ್ಗವನ್ನು ಅನುಸರಿಸಲು ಕೇರಳದ ಹಿಂದಿ ವಿರುದ್ಧ ಸಮಿತಿ ನಿರ್ಧರಿಸಿದೆ.

★

ಭಾಷಾ ಸಮಸ್ಯೆ

ಪೂನಾ— ಭಾಷಾ ಸಮಸ್ಯೆ " ರಾಜಕೀಯ ತಪ್ಪಿನಿಂದ ' ಉಲ್ಬಣಿಸಿದ್ದಿಂದೂ, ಭಾಷೆ ಬದಲಾಯಿಸುವುದು ಅಥವಾ ಅದನ್ನು ಯಾರ ಮೇಲಾದರೂ ಹೇರುವುದೂ ಅಪಾಯಕಾರಿ ಮತ್ತು ಪ್ರಕೃತಿ ವಿರುದ್ಧವೆಂದು ಪೂನಾ ವಿಶ್ವವಿದ್ಯಾಲಯದ ಉಪಕುಲಪತಿ ಶ್ರೀ ಪಟಾಸ್ಕರ್ ಹೇಳಿದರು.

★

ಹೊಸ ಮುಖ್ಯಮಂತ್ರಿಗಳು

ಬೆಂಗಳೂರು— ತಮ್ಮ ಮಂತ್ರಿಮಂಡಲದಲ್ಲಿ 12 ಮಂದಿಗೆ ಹೆಚ್ಚಿಲ್ಲದಿದ್ದು, ಅಷ್ಟೇ ಮಂದಿ ಉಪ ಅಥವಾ ಸ್ಟೇಟ್ ಮಂತ್ರಿಗಳಿರುವರೆಂದು ಶ್ರೀ ವೀರೇಂದ್ರ ಪಾಟ್ಕಿಲರು ಪತ್ರಿಕೆಯವರಿಗೆ ತಿಳಿಸಿದರು —ಉಪ ಪ್ರಧಾನಿ ಮೊರಾರ್ಜಿ ದೇಸ್ಯಾರು, ತಮ್ಮ ಮಂತ್ರಿಮಂತ್ರಿಮಂಡಲವು ಚಿಕ್ಕ ಮತ್ತು ಚೊಕ್ಕವಾಗಿರಬೇಕೆಂದು ಹೇಳಿರುವದಾಗಿ ತಿಳಿಸಿದರು — ಪ್ರತಿ ಜಿಲ್ಲೆಯಿಂದಲೂ ಒಬ್ಬೊಬ್ಬರನ್ನು ಆರಿಸುವ ಇಚ್ಛೆ ಶ್ರೀ ಪಾಟಿಲರವರಿಗಿರುವಂತಿದೆ.

★

ಪ್ರತಿಭಟನೆ

ಮದರಾಸು— ಕೇಂದ್ರ ಸ್ಕೂಲುಗಳಲ್ಲಿ ಹಿಂದಿಯನ್ನು ಏಕಮಾತ್ರ ಮಾಧ್ಯಮ ಮಾಡಲಾಗುವದೆಂಬ ವರದಿ ಬಗ್ಗೆ, ಪ್ರತಿಭಟಿಸಿ ಕೇಂದ್ರ ವಿದ್ಯಾಮಂತ್ರಿಗಳಿಗೆ ತಾವು ಬರೆಯುವುದಾಗಿ ಮದ್ರಾಸು ವಿದ್ಯಾಮಂತ್ರಿಗಳು ಹೇಳಿದರು — ಮದ್ರಾಸು ರಾಜ್ಯದಲ್ಲಿ 9 ಕೇಂದ್ರ ಶಾಲೆಗಳಿವೆ.

ವಿವಿಧ ವಿಷಯಗಳು

ರಾಯಚೂರು. ಜವಾಹರನಗರ ಕಾಲನಿಯಲ್ಲಿ ಒಂದು ಭಾವಿ ಮೇಲೆ ಕಟ್ಟಿದ್ದ ಪೌರಸಭೆಯ ನೀರಿನ ಟ್ಯಾಂಕ್ ಒಡೆದು ಬಿದ್ದು 4 ಮಂದಿ ಸತ್ತರು.

ಪ್ಯಾರಿಸ್. 19 ಮಿಲಿಯ ಕಾರ್ಮಿಕರಲ್ಲಿ 9 ಮಿಲಿಯ ಕಾರ್ಮಿಕರು ನಡೆಸುತ್ತಿರುವ ಮತ್ತು ದೇಶದಲ್ಲಿ ಕಳವಳ ಉಂಟುಮಾಡುತ್ತಿರುವ ಭಾರಿ ಮುಷ್ಕರ ಮುಕ್ತಾಯಕ್ಕೆ, ಹಿಂದಿದ್ದ ದರಕ್ಕಿಂತ ಅವರಿಗೆ ಶೇಕಡ 36 ಹೆಚ್ಚಿಸಲು ಯೋಜಿಸಲಾಗಿದೆ.

ಸಿಡ್ನಿ. ಏಷ್ಯದಲ್ಲಿ ಶಾಂತಿ ಅಭ್ಯುದಯಕ್ಕೆ ಭವ್ಯವಾದ ಭಾರತ ಅವಶ್ಯಕವೆಂದು ಹಾಗೆಯೇ ಭವ್ಯವಾದ ಅಭ್ಯುದಯಗೊಂಡ ಏಷ್ಯ ನಮ್ಮ ಶಾಂತಿ ಮತ್ತು ಅಭಿವೃದ್ಧಿ ಒಲಸಡಿಸುವುದೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಹೇಳಿದರು. ಭಾರತವು ಸ್ವತಂತ್ರವಾದಾಗ ವಿಶ್ವವು ಎರಡು ಶತ್ರು ತಂಡ ಆಗಿ ವಿಭಾಗ ಆಯಿತೆಂದು ಹೇಳಿದರು.

ಬಿರೂಟ್. ಇಸ್ರೇಲು ಮೇಲಿನ ದಾಳಿಯಲ್ಲಿ ಅರಬ್ಬರ ಜೊತೆಗೆ ಚೀನಾವು ಸೇರಿರುವುದಾಗಿ ಪ್ರಕಟವಾಗಿದೆ.

ಮಧುರೆ. ತಾ|| 25 ರಂದು ಆದ ಕ್ವಿಲೋನ್ ಕಿನ್ನನಳ್ಳಿ ಪ್ರಯಾಣೀಕರ ರೈಲು ಮತ್ತು ಒಂದು ಗೂಡ್ಸು ರೈಲು ಡಿಕ್ಕಿ ಹೊಡೆದು ಅನೇಕರು ಗಾಯಗೊಂಡ ಪ್ರಸಂಗದಲ್ಲಿ ತಿರಿಯನ್‌ಕಾವು ಸ್ಟೇಷ ಮಾಸ್ಟರು ಮತ್ತು ಪಾಯಿಂಟ್ಸ್‌ಮನ್‌ಸ್ಪಂಡಾಗಿರುವರು.

ತಿರುಪತಿ. ಯಾರೋ ಒಬ್ಬರು ಶ್ರೀ ವೆಂಕಟೇಶ್ವರ ಸ್ವಾಮಿಗೆ* ಹದಿನಾಲ್ಕು ಕಿಲೋ ಬೆಳ್ಳಿ ಅರ್ಪಿಸಿರುವರು. ನಾಮಾವಳಿ ಕೂಡಿದ ಭಂಗಾರದ ಕಂಠಾಹಾರವನ್ನು ಸ್ವಾಮಿಗೆ ತಯಾರಿಸಬೇಕೆಂದು, ರತ್ನಖಚಿತಹಸ್ತೆ ತಯಾರಿಸಲಾಗುವುದೆಂದೂ ಧರ್ಮದರ್ಶಿಗಳ ಸಮಿತಿ ಅಧ್ಯಕ್ಷರು ತಿಳಿಸಿದರು.

ಆಶೋಕ ಪಿಜೆನ್‌ಸೀನ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಬೆಂಗಳೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ಗೋವಧೆ ಕೂಡಲೆ ನಿಷೇಧವಾಗಲಿ

Cow Slaughter should be banned Immediately

SHAKTI SUDHA

A Superb Tonic

Protect the Cow

ಗೋರಕ್ಷಣೆ ಮತ್ತು ವ್ಯಾಪಕವಾಗಿ ಈ ಕಾರ್ಯಗಳು ಹೆಚ್ಚಿ ಚಾಲ್ತಿಗಿ ನಡೆಯಲಿ

ಶ್ರೀ ಶಂಕರಾಚಾರ್ಯ ಜಗದ್ಗುರು ಮಹಾಸನ್ನಿಧಿಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸನ್ನಿಧಿಗಳವರ ಆಜ್ಞಾನುಸಾರ ಈ ಗ್ರಂಥ ಪ್ರಕಟವಾಗಿದೆ

ಕರ್ನಾಟಕದಲ್ಲಿ ಗೋರಕ್ಷಣೆ ವಿಶೇಷವಾಗಿ, ತಕ್ಷಣವಾಗಿ, ಪರಿಪೂರ್ಣ, ಎಲ್ಲಾ ಕಡೆಗಳಲ್ಲಿ ಪ್ರಚಾರ ಪಡಿಸಲಿಕ್ಕಾಗಿ, ಎಂಬ ಸದುದ್ದೇಶ 50 ಪೈಸೆ

ವುಡ್‌ಲಾಂಡ್ಸ್ ಜನವರಿಯು 4 ನೇ ವಾರ

.... ಸುಬೋಧ್ ಮುಖರ್ಜಿಯವರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಷಾಗಿರ್ದ್ Shagird

ತಾರಾಗಣ— ಜಾಯ್ ಮುಖರ್ಜಿ, ಸೈರಾಬಾನು, ನಾಜಿರ್ ಹುಸೇನ್
ಅಚ್ಚಲ ಸಹದೇವ್, ಐ. ಎಸ್. ಜೋಹರ್ [ದಿನ 3 ಪ್ರದರ್ಶನ]

ಆಪೆರ— ಅಮೋಘ ಕನ್ನಡ ವಾರ

.... ಅಮೋಘ ಕನ್ನಡ ಚಿತ್ರ ....

ಬೆಂಗಳೂರು ಮೇಲ್

ಪಾತ್ರ : ರಾಜಕುಮಾರ್ ನರಸಿಂಹರಾಜು ಕೊಟ್ಟಾರಕರ್
ಅಶ್ವತ್ಥ್ ಜಯಂತಿ ವಿಜಯಲಲಿತ

Help The Gorakshana

ಗೋರಕ್ಷಣೆಗೆ ಹಣ ಸಲ ನೀಡಿ

— ಗೋರಕ್ಷಣ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆ ಕಳೆದಿರುವವರು ಇನ್ನಲ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತನಂಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ, ಹೊಂಗನೂರು
ಗೋರಕ್ಷಣ ಆಫೀಸು ಸತ್ಯವಾದಿ ಪ್ರೆಸ್, ಚಾಮರಾಜಪುರಂ ಮೈಸೂರು 4
ವಿಳಾಸ— ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4